**ವ್ಯಾಖ್ಯಾನ**

# <u>ಚೋರಗೆ ಚಂದ್ರೋದಯ ಸೊಗಸುವುದೆ</u>

ಉಗಾಭೋಗದ ಚಿಂತನೆ:

> **ಚೋರಗೆ ಚಂದ್ರೋದಯ ಸೊಗಸುವುದೆ ?**
>
> **ಜಾರಗೆ ಸೂರ್ಯೋದಯ ಸೊಗಸುವುದೆ ?**
>
> **ಶ್ರೀರಮಣನ ಕಥೆಯು ಕಳ್ಳಗೆ ಮೆಚ್ಚುವುದೆ ?**
>
> **ನಾರಿಯ ನಯನವಿಲ್ಲದ ಚೆಲುವಿಕೆಯು**
>
> **ಹರಿ ಸ್ಮರಣವಿಲ್ಲದ ಹಾಡಿಕೆಯು**
>
> **ಅರಣ್ಯರೋದನ(ವಯ್ಯ) ಪುರಂದರ ವಿಠಲ**

ಶ್ರೀ ರಮಣನ ಕಥೆ ಕೇಳುವವರು ಹೇಗಿರುತ್ತಾರೆ ಎನ್ನುವುದನ್ನು ಶ್ರೀ ಪುರಂದರ ದಾಸರು ತಿಳಿಸುತ್ತಿದ್ದರೆ.

ಅದನ್ನು ತಿಳಿಸಲು ಯಾರಿಗೆ ಹರಿಕಥೆ ಸೇರುವುದಿಲ್ಲ ಎನ್ನುವುದನ್ನು ಪ್ರಸ್ತಾಪಿಸುತ್ತ ಕೆಲವು ಉಪಮಾನಗಳನ್ನು ಕೊಡುತ್ತಾರೆ.

ಕಳ್ಳರು ಕತ್ತಲೆ ಬಯಸುವವರು ಅವರಿಗೆ ಚಂದ್ರೋದಯ ಇಷ್ಟವಿಲ್ಲ, ಬೆಳಕು ಬಂದರೆ ತಮ್ಮ ಕಾರ್ಯ ನಡೆಯುವುದಿಲ್ಲವಲ್ಲ. ಹಾಗೆಯೇ ರಾತ್ರಿಯಲ್ಲಿ ವೇಶ್ಯೆಯರನ್ನು ಅರಸಿ ಹೋಗುವವಗೆ ಸೂರ್ಯೋದಯ ಇಷ್ಟವಿಲ್ಲ.

ಶ್ರೀ ರಮಣನ ಕಥೆ ಕಳ್ಳರಿಗೆ ಮೆಚ್ಚುವುದೇ ... ಕಳ್ಳರಿಗೆ ಹರಿಕಥೆ ಸೇರುವುದಿಲ್ಲ.

ಇದರ ವಿರುದ್ಧ, ಅಂದರೆ ಕಳ್ಳರಾಗದವರಿಗೆ ಹರಿಕಥೆ ಮೆಚ್ಚುವುದು. ನಾವೂ ಕಳ್ಳರಾದರೆ ಹರಿಕಥೆ ಆಳಕ್ಕೆ ಇಳಿಯಲಾರದು.

ಇಲ್ಲಿ ಕಳ್ಳರು ಎಂದರೆ,

ಹರಿಗುಣಗಳ ಕದಿಯುವವರು ಕಳ್ಳರು.

ಅದ್ಹೇಗೆ? ಎಂದರೆ

ಎಲ್ಲ ಕಾರ್ಯಗಳನ್ನೂ ಹರಿಯೇ ಮಾಡಿಸುತ್ತಾನೆಂದು ತಿಳಿದಿದ್ದರೂ ನಾನು ಮಾಡಿದೆ ಎಂದು ಕರ್ತೃತ್ವ ಅನುಸಂಧಾನ ಮಾಡುವುದು ಒಂದು ಹರಿಯ ಸ್ವಾತಂತ್ರ್ಯ ಕದ್ದ ಕಳ್ಳತನ.

ಶ್ರೀ

ದೇಹ, ಗೇಹಾದಿಗಳು ಹರಿ ಕೊಟ್ಟದ್ದೆಂದು ಅರಿತರೂ ನನ್ನದೆಂಬ ಮಮಕಾರಹೊಂದಿರುವುದು,ಇದು ಕಳ್ಳತನವಲ್ಲದೇ ಮತ್ತೇನು.

ಭಗವದ್ಭಕ್ತರೆನೆಸಬೇಕಾದರೆ ಈ ಕಳ್ಳತನವನ್ನು ಬಿಡಬೇಕು.

"ಈ ತನುವಿನೊಳು ಮಮತೆ ಬಿಟ್ಟವನವನೆ ಮಹಯೋಗಿ"ಎನ್ನುತ್ತಾರೆ ಶ್ರೀ ಜಗನ್ನಾಥ ದಾಸರು.

ಕರ್ತೃತ್ತ,ಭೋಕ್ತೃತ್ವ ಅನುಸಂಧಾನಾದಿಗಳನ್ನು, ಬಿಟ್ಟು, ಎಲ್ಲವೂ ಹರಿಕೊಟ್ಟದ್ದು, ದ್ವಂದ್ವ ಕರ್ಮಗಳನ್ನು ಶ್ರೀಹರಿಯೇ ಮಾಡಿಸುತ್ತಾನೆಂದು ಚಿಂತಿಸುವವರು ನಿಜವಾದ ಭಗವದ್ಭಕ್ತರು ಎನ್ನುವುದು ಈ ಉಗಾಭೋಗದ ಹಿಂದಿರುವ ಆಶಯ ಎನಿಸುತ್ತದೆ.

ಪ್ರಸನ್ನವೆಂಕಟ ದಾಸರು ಇದನ್ನು ಬಹಳ ಮಾರ್ಮಿಕವಾಗಿ ಹೇಳುತ್ತಾರೆ.

**"ನಿನ್ನ ನಾಮ ಹೋಳಿಗೆ ಶ್ರೀನಿವಾಸ ಕದ್ದ ಕಳ್ಳಕುನ್ನಿನಾನಾಗಿಹೆ ಶ್ರೀನಿವಾಸ**" ಎಂದು.

ಭಗವಂತನ ನಾಮವನ್ನು ಕದಿಯುವ ಅಂದರೆ ಹೇಳುವ ಕಳ್ಳರು ನಾವಾಗಬೇಕು.

ಆ ಕಳ್ಳತನಕ್ಕೆ ದೇವರು ತನ್ನ ಲೋಕದ ಕಾರಾಗ್ರಹದಲ್ಲಿ ಹಾಕುತ್ತಾನೆ. ಅಂದರೆ ಮೋಕ್ಷ ಕೊಡುತ್ತಾನೆ.

ಸೌಂದರ್ಯ ವಿನಯದಿಂದ ಶೋಭಿಸುವಂತೆ, ಸಂಗೀತ ಹರಿಗುಣ ಕೀರ್ತನೆಯಿಂದ ಪೂರ್ಣವಾಗುವುದು.

ಇಲ್ಲವಾದರೆ ಅದು ಅರಣ್ಯ ರೋದನ.  ಎಂದರೆ ಫಲವಿಲ್ಲದೇ ಹೋಗುವುದು ಎಂದು ಹೇಳುತ್ತಾರೆ.

ಏನೇ ಮಾಡಿದರು ಹರಿ ಸ್ಮರಣೆ ಪೂರ್ವಕ ಮಾಡಿ ಸತ್ಕರ್ಮಗಳೆಲ್ಲ ಹರಿಪೂಜೆಯೆಂದು ಸಮರ್ಪಿಸಬೇಕು.

ಎನ್ನುತ್ತಾರೆ ದಾಸರು.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ